# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪುಲಿಕೇಶಿನಗರ ಉಪವಿಭಾಗ, ರಾಬರ್ಟಸನ್ಸ್ ರಸ್ತೆ, ಫ್ರೇಜರ್ ಟೌನ್**

ಸ.ಕಾ.ನಿ.ಅ/ಮನ/ಪಿಆರ್/274 /2018-19 ದಿನಾಂಕ: 02-02-2019

**ದಿನಾಂಕ:- 02-02-2019 ರಂದು ವಾರ್ಡ್ ನಂ.78 ರ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

**ಸಭೆಗೆ ಹಾಜರಿದ್ದವರು:-**

1. ಬಿ.ಬಿ.ಎಂ.ಪಿ ವಾರ್ಡ್ ಸಂಖ್ಯೆ:78 ರ ಮಾನ್ಯ ಸದಸ್ಯರು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ.ಎ.ಆರ್.ಜಾಕೀರ್ ರವರು.
2. ಸಹಾಯಕ ಅಭಿಯಂತರರು, ವಾರ್ಡ್ ನಂ.78 ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀಮತಿ.ಸಾವಿತ್ರಿ.
3. ವಾರ್ಡ್ ಸಮಿತಿಯ ಸಮಿತಿ ಸದಸ್ಯರು ಸಭೆಗೆ ಹಾಜರಿದ್ದರು.
4. ಸಹಾಯಕ ಕಂದಾಯ ಅಧಿಕಾರಿಗಳು (ಪುಲಿಕೇಶಿನಗರ) ರವರು.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ವಿಭಾಗ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಪುಲಿಕೇಶಿನಗರ ಉಪವಿಭಾಗ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು /ವಿದ್ಯುತ್ /ಸ್ಟ್ರೀಟ್ ಲೈಟ್/ ಕಂದಾಯ ಪರಿವೀಕ್ಷಕರು/ಕಂದಾಯ ವಸೂಲಿಗಾರರು/ಕಛೇರಿ ನೌಕರರು.

ವಾರ್ಡ್ ಸಮಿತಿಯ ಸಭೆಯನ್ನು ಪ್ರಾರಂಭಗೊಳ್ಳುತ್ತಿದಂತೆ ಅಧ್ಯಕ್ಷರಾದ ಶ್ರೀ.ಎ.ಆರ್.ಜಾಕೀರ್ ರವರು ಪಾಲಿಕೆಯ ವಾರ್ಡ್ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

ಹಿಂದೆ ನಡೆದ ಸಭೆಯಲ್ಲಿ ತಿಳಿಸಲಾಗಿದ ವಿಷಯಗಳ ಬಗ್ಗೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಿರುತ್ತಾರೆ.

1. ಕಮಿಟಿಯ ಎಲ್ಲಾ ಸದಸ್ಯರು ತಮ್ಮ ತಮ್ಮ ಏರಿಯಾದಲ್ಲಿ ತಪಾಸಣೆ ನಡೆಸಿ ಉಳಿದ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ನೀಡಲು ತಿಳಿಸಿದರು.
2. ತ್ಯಾಜ್ಯ ವಿಂಗಡಣೆ ಮಾಡದಿರುವ ಅಪಾರ್ಟ್‌ಮೆಂಟ್‌ಗಳಿಗೆ ನೋಟೀಸ್ ನೀಡಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರಿಗೆ ತಿಳಿಸಲಾಗಿರುತ್ತದೆ.
3. ರಸ್ತೆಗಳಲ್ಲಿ ಪಾರ್ಕಿಂಗ್ ಮಾಡುತ್ತಿರುವ ಅಂಗಡಿಗಳಿಗೆ ನೋಟೀಸ್ ನೀಡಲು ತಿಳಿಸಲಾಗಿರುತ್ತದೆ.
4. ಕೋಲ್ಸ್ ಪಾರ್ಕ್ ಸುತ್ತಮುತ್ತಲಿನ ಪುಟ್ ಮೇಲೆ ವ್ಯಾಪಾರ ಮಾಡುತ್ತಿರುವ ಬೀದಿ ವ್ಯಾಪರಿಗಳನ್ನು ನಿಯಂತ್ರಿಸಲು ತಿಳಿಸಲಾಗಿರುತ್ತದೆ.
5. ಸಂತೋಷ್ ಆಸ್ಪತ್ರೆ ಮತ್ತು ಗವಾಯಿ ಆಸ್ಪತ್ರೆಯ ಹತ್ತಿರ ಪಾರ್ಕಿಂಗ್ ಸಮಸ್ಯೆ ಆಗುತ್ತಿರುವ ಬಗ್ಗೆ ಸಂಚಾರ ಪೋಲೀಸ್ ಠಾಣೆರವರಿಗೆ ಪತ್ರ ಬರೆಯಲು ತಿಳಿಸಿರುತ್ತಾರೆ.
6. ನೇತಾಜಿ ರಸ್ತೆಯಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಗುತ್ತಿಗೆದಾರರಿಂದ ಪುಟ್‌ಪಾತ್ ಅನ್ನು ದುರಸ್ಥಿಗೊಳಿಸಲು ತಿಳಿಸಿರುತ್ತಾರೆ.
7. ಸಂತೋಷ್ ಆಸ್ಪತ್ರೆಯ ಮುಂದಿರುವ ಪುಟ್‌ಪಾತ್ ಮೇಲೆ ಹಾಕಿರಿರುವ ಬ್ಯಾರಿಕೆಡ್‌ಗಳನ್ನು ತೆರವುಗೊಳಿಸಲು ತಿಳಿಸಿರುತ್ತಾರೆ.

Scanned with CamScanner

8. ವಾರ್ಡ್ ವ್ಯಾಪ್ತಿಯಲ್ಲಿ ಅನುಪಯುಕ್ತವಾಗಿ ರಸ್ತೆಗಳ ಮೇಲೆ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸಿ ಸುಲ್ತಾನ್ ಜೀ ಗುಂಟಾ ರಸ್ತೆಯಲ್ಲಿರುವ ಬಿ.ಬಿ.ಎಂ.ಪಿ ಮೈದಾನದಲ್ಲಿ ಹಾಕಲು ಸಂಚಾರ ಪೋಲಿಸ್ ಇಲಾಖೆ ರವರಿಗೆ ಪತ್ರ ಬರೆಯಲು ತಿಳಿಸಲಾಗಿರುತ್ತದೆ.

9. ಕೋಲ್ಸ್ ಪಾರ್ಕಿನ ಸುತ್ತಲೂ Chain links ಬದಲಾಗಿ ಗ್ರಿಲ್ಸ್ ಅಳವಡಿಸಲು ಫ್ರೇಜರ್ ಟೌನ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಷಿಯನ್ಸ್‌ನ ಶ್ರೀಮತಿ ನಳಿನ ರವರು ಸಭೆಯಲ್ಲಿ ತಿಳಿಸಿರುತ್ತಾರೆ.

10. ವಾರ್ಡ್ ವ್ಯಾಪ್ತಿಯಲ್ಲಿರುವ ಕಟ್ಟಡಗಳ ತಳ ಮಹಡಿಯಲ್ಲಿ ಪಾರ್ಕಿಂಗ್ ಬದಲಾಗಿ ವಾಣಿಜ್ಯ ವ್ಯಾಪಾರ ಮಾಡುತ್ತಿರುವವರಿಗೆ ನೋಟೀಸ್ ನೀಡಲು ತಿಳಿಸಿರುತ್ತಾರೆ.

11. ಪ್ರಾಮೀನೆಡ್ ರಸ್ತೆ, 2ನೇ ಅಡ್ಡರಸ್ತೆಯಲ್ಲಿ ಸಿ.ಸಿ.ಟಿ.ವಿ ಕ್ಯಾಮರ ಮತ್ತು ಪಾರ್ಕ್‌ನ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ತಿಳಿಸಿರುತ್ತಾರೆ.

12. ತಿಮ್ಮಯ್ಯ ರಸ್ತೆ, ಧನಕೋಟಿ ಲೇನ್‌ನಲ್ಲಿ ಸಿ.ಸಿ.ಟಿ.ವಿ ಕ್ಯಾಮರಗಳನ್ನು ಅಳವಡಿಸಲು ಶ್ರೀಮತಿ.ಚಾಂದ್ ಸುಲ್ತಾನ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ.

13. ನೇತಾಜಿ ರಸ್ತೆಯಲ್ಲಿ ಸೈನ್ ಬೋರ್ಡ್ ಅಳವಡಿಸಲು ತಿಳಿಸಿರುತ್ತಾರೆ.

14. ಅಪರ ಆಯುಕ್ತರು, ಸಂಚಾರ ರವರಿಗೆ ವಾರ್ಡಿನ ವ್ಯಾಪ್ತಿಯಲ್ಲಿ ಬೈಕ್‌ಗಳಲ್ಲಿ ವಿಲ್ಲಿಂಗ್ ಮಾಡುತ್ತಿರುವವರಿಗೆ ದಂಢ ವಿಧಿಸುವಂತೆ ಪತ್ರ ಬರೆಯಲು ತಿಳಿಸಿರುತ್ತಾರೆ.

15. ಸ್ಟಿಫನ್ಸ್ ರಸ್ತೆಯ ಎರಡು ಬದಿಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿರುವ ಬಗ್ಗೆ ತಿಳಿಸಿರುತ್ತಾರೆ.

16. ನೇತಾಜಿ ರಸ್ತೆಯಲ್ಲಿರುವ ಮೈದಾನದಲ್ಲಿ ಸ್ಪೋರ್ಟ್ಸ್ ಕಾಂಪ್ಲೇಕ್ಸ್ ನಿರ್ಮಾಣ ಕಾಮಗಾರಿಯನ್ನು ಶೀಘ್ರವಾಗಿ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

17. ಪಾರ್ಕ್‌ಗಳ ಅಭಿವೃದ್ಧಿ ಕಾಮಗಾರಿಗಳಿಗೆ ರೂ.400.00 ಲಕ್ಷಗಳ ಅನುದಾನ ಅನುಮೋದನೆಗೆ ಹಾಗೂ ಜಾಬ್‌ಸಂಖ್ಯೆ ಪಡೆಯಲು ಕಡತವನ್ನು ಕಳುಹಿಸಿರುವ ಬಗ್ಗೆ ತಿಳಿಸಲಾಗಿರುತ್ತದೆ.

18. ಕೋಲ್ಸ್ ಪಾರ್ಕಿನ ಒಳಗೆ ಮಕ್ಕಳು ಆಟವಾಡಲು ಯಂತ್ರೋಪಕರಣಗಳನ್ನು ಮತ್ತು ಜೀಮ್ ಯಂತ್ರೋಪಕರಣಗಳನ್ನು ಹೆಚ್ಚುವರಿಯಾಗಿ ಅಳವಡಿಸುವುದರ ಬಗ್ಗೆ ತಿಳಿಸಲಾಗಿರುತ್ತದೆ.

19. ನೇತಾಜಿ ರಸ್ತೆಯಿಂದ ಎಸ್.ಕೆ.ಗಾರ್ಡನ್ ರಸ್ತೆವರೆಗೆ Under pass ಮಾಡಲು ತಿಳಿಸಲಾಗಿರುತ್ತದೆ.

20. ಮಾಸ್ಕ್ ರಸ್ತೆಯ ಮಸೀದಿ ಹತ್ತಿರ ಬೋರ್‌ವೆಲ್ ಕೊರೆಸಲು ಕಮಿಟಿ ಸದಸ್ಯರಾದ ಶ್ರೀಮತಿ.ಶೀಲಾ ರವರು ಸಭೆಯಲ್ಲಿ ತಿಳಿಸಿದರು.

21. ಪ್ರಾಮಿನೆಡ್ ಅಡ್ಡರಸ್ತೆಯಲ್ಲಿ ಎಲ್.ಇ.ಡಿ ಲೈಟ್ಸ್‌ಗಳನ್ನು ಅಳವಡಿಸಲು ತಿಳಿಸಿರುತ್ತಾರೆ.

22. ವಾರ್ಡ್ ವ್ಯಾಪ್ತಿಯಲ್ಲಿ ಇಲಿಗಳನ್ನು ನಿಯಂತ್ರಿಸಲು Aluminum Phosphate Tablets ಗಳನ್ನು ಇಡಲು ಕ್ರಮ ತೆಗೆದುಕೊಳ್ಳುವಂತೆ ಡಾ॥ಸಿ.ಜಿ.ಸೈದಾ ರವರಿಗೆ ತಿಳಿಸಲು ಸೂಚಿಸಲಾಯಿತು.

23. ವಾರ್ಡ್ ವ್ಯಾಪ್ತಿಯಲ್ಲಿ Mosquito Fumisition ತಡೆಯಲು ಸ್ಪ್ರೇಯಿಂಗ್ / ಫಾಗಿಂಗ್ ಮಾಡಲು ತಿಳಿಸಿರುತ್ತಾರೆ.

24. ಸ್ಮೋಕ್ ಗನ್‌ಅನ್ನು ವಾರ್ಡ್ ನಂ.78 ಕ್ಕೆ ನೀಡಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿ, ವಾರದಲ್ಲಿ ನಾಲ್ಕು ದಿನ ಫಾಗಿಂಗ್ ಮಾಡಲು ತಿಳಿಸಿರುತ್ತಾರೆ.

25. ವಾರ್ಡ್ ವ್ಯಾಪ್ತಿಯಲ್ಲಿ ಸ್ಪ್ರೇಯಿಂಗ್ ಯಂತ್ರಗಳನ್ನು ಹೆಚ್ಚಿಸಲು ತಿಳಿಸಿರುತ್ತಾರೆ.

26. ಕ್ಲೀವ್‌ಲ್ಯಾಂಡ್ ರಸ್ತೆಯ ಚರಂಡಿಯಲ್ಲಿ ಹೂಳು ತೆಗೆಯಲು ತಿಳಿಸಿರುತ್ತಾರೆ.

27. ಮಾಸ್ಕ್ ರಸ್ತೆ ಮತ್ತು ಕೋಲ್ಸ್ ರಸ್ತೆಯ ಜಂಕ್ಷನ್ ಹತ್ತಿರ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿದ್ದು, ಇದರ ಬಗ್ಗೆ ಕ್ರಮ ವಹಿಸಲು ಸಂಚಾರ ಪೋಲೀಸ್ ಠಾಣೆ ಪತ್ರ ಬರೆಯಲು ತಿಳಿಸಿರುತ್ತಾರೆ.

28. ವಾರ್ಡ್ ವ್ಯಾಪ್ತಿಯಲ್ಲಿ ಉಪಯೋಗಿಸುತ್ತಿರುವ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ವಶಪಡಿಸಿಕೊಳ್ಳಲು ತಿಳಿಸಿರುತ್ತಾರೆ.

Scanned with CamScanner

29. ನ್ಯೂ ತಿರುಪತಿ ಫ್ರೈ ಫ್ರೂಟ್ಸ್ ಹತ್ತಿರ ಹೊಸದಾಗಿ ಸ್ಯಾನಿಟರಿ ಲೈನ್ ಹಾಕಲು ತಿಳಿಸಿರುತ್ತಾರೆ.
30. ನೇತಾಜಿ ರಸ್ತೆಯಲ್ಲಿ ವ್ಯಾಪಾರ ಮಾಡುತ್ತಿರುವ ಬೀದಿ ವ್ಯಾಪಾರಿಗಳನ್ನು ನಿಯಂತ್ರಿಸುವ ಬಗ್ಗೆ ತಿಳಿಸಿರುತ್ತಾರೆ.
31. ಹೆನ್ಸ್ ರಸ್ತೆಯಲ್ಲಿರುವ ಅಬ್ದುಲ್ ಬಾರೀಸ್ ಶಾಲೆಯ ಹತ್ತಿರ ಸ್ಲ್ಯಾಬ್ ಸರಿಪಡಿಸಲು ತಿಳಿಸಿರುತ್ತಾರೆ.
32. ವಾರ್ಡ್ ವ್ಯಾಪ್ತಿಯಲ್ಲಿರುವ 45 ವರ್ಷದ ಮೇಲ್ಪಟ್ಟವರಿಗೆ Infuenzil Virus Vaxination ಮಾಡಲು ಕ್ರಮ ಕೈಗೊಳ್ಳುವ ಆರೋಗ್ಯ ವೈದ್ಯಾಧಿಕಾರಿಗಳಿಗೆ ಪತ್ರ ಬರೆಯಲು ತಿಳಿಸಿರುತ್ತಾರೆ.
33. ವಾರ್ಡ್ ವ್ಯಾಪ್ತಿಯಲ್ಲಿ ಜಿರಳೆ ಔಷಧಿ ಸಿಂಪಡಿಸಲು ಆರೋಗ್ಯ ವೈದ್ಯಾಧಿಕಾರಿಗಳಿಗೆ ಪತ್ರ ಬರೆಯಲು ತಿಳಿಸಿರುತ್ತಾರೆ.
34. ಕಲ್ಯಾಣ ಯೋಜನೆ ಅಡಿಯಲ್ಲಿ 15 ಲ್ಯಾಪ್‌ಟಾಪ್, 11 ಆಟೋ ರಿಕ್ಷಾ, 01 ಪಿಂಕ್ ಆಟೋರಿಕ್ಷಾ, 09 ಕಾರ್, 03 ಸಾಲ ಮರುಪಾವತಿ ಮತ್ತು 07 ಜನರಿಗೆ 2+2 ಚಕ್ರದ ವಾಹನಗಳನ್ನು ಫಲಾನುಭವಿಗಳಿಗೆ ನೀಡುವ ಬಗ್ಗೆ ಮಾನ್ಯ ಅಧ್ಯಕ್ಷರು ಹಾಗೂ ವಾರ್ಡ್ ಸದಸ್ಯರು ರವರಿಗೆ ಅರ್ಜಿಗಳು ಬಂದಿದ್ದು, ಸದರಿ ಅರ್ಜಿಗಳನ್ನು ವಾರ್ಡ್ ಕಮಿಟಿ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ನಂತರ ಮುಂದಿನ ಸಭೆಯೊಳಗೆ ಮೇಲ್ಕಂಡ ಎಲ್ಲಾ ಕೆಲಸ ಕಾರ್ಯಗಳ ಬಗ್ಗೆ ಪಟ್ಟಿ ನೀಡಬೇಕೆಂದು ಎಲ್ಲಾ ಸದಸ್ಯರಿಗೆ ತಿಳಿಸಿ ಎಲ್ಲಾ ಕೆಲಸ ಕಾರ್ಯಗಳನ್ನು ಆದ್ಯತೆ ನೀಡಿ ಮುಕ್ತಾಯಗೊಳಿಸಲು ಸೂಚಿಸುತ್ತಾ, ಮುಂದಿನ ಸಭೆಯನ್ನು ದಿನಾಂಕ: 02-03-2019 ರಂದು ನಿಗದಿಪಡಿಸಿ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು                                                  ಕಾರ್ಯದರ್ಶಿ

ಪ್ರತಿಯನ್ನು:
1. ಪೂಜ್ಯ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಉಪ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯದರ್ಶಿಗಳು, ಕೌನ್ಸಿಲ್ ಕಾರ್ಯಾಲಯ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ವಾರ್ಡ್ ಸಮಿತಿಯ ಸದಸ್ಯರು, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
6. ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ಉಪ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ವಿಭಾಗ ರವರ ಅವಗಾಹನೆಗಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ / ಪುಲಿಕೇಶಿನಗರ) ರವರ ಅವಗಾಹನೆಗಾಗಿ ಕಳುಹಿಸಿದೆ.

Scanned with CamScanner